## ಮೈತಿಕ ಹರಣ

ಸಂಜೆ ಕಾಫಿ ಕುಡಿಯುತ್ತಿದ್ದಾಗ ಮೊಮ್ಮಗ ಮೆಲ್ಲನೆ ಹತ್ತಿರ ಬಂದು ಕೇಳಿದ, 'ತಾತಾ ಮೈತಿಕ ಹರಣ ಅಂದರೇನು?' ಅಂತ. ಎಷ್ಟು ತಲೆ ಕೆಡಿಸಿಕೊಂಡರೂ ಅವನು ಏನು ಕೇಳುತ್ತಿದ್ದಾನೆಂದು ಅರ್ಥವಾಗಲೇ ಇಲ್ಲ. ಅವನನ್ನೇ ಕೇಳಿದೆ. 'ಏನೊ ಅದು, ಎಲ್ಲಿ ಕೇಳಿಸಿಕೊಂಡೆ?' ಎಂದು. 'ಟೀವಿಯಲ್ಲಿ ಎರಡು ದಿನದಿಂದ ಅದನ್ನೇ ಹೇಳ್ತಾ ಇದ್ದಾರಲ್ಲ... ಆ ಮಂತ್ರಿಯನ್ನು ತೋರಿಸಿ...' ಎಂದ. ಆಗ ನನಗೆ ಅರ್ಥವಾಯಿತು. ಮಂತ್ರಿಯೊಬ್ಬರ ಅನೈತಿಕ ಹಗರಣದ ಸುದ್ದಿ ಟೀವಿಯಲ್ಲಿ ಪ್ರಸಾರವಾಗುತ್ತಿರುವುದನ್ನು ನೋಡಿ ನೋಡಿ ಅದು ಇವನ ಬಾಯಿಯಲ್ಲಿ 'ಮೈತಿಕ ಹರಣ' ಆಗಿದೆ ಅಂತ.

**ಪ್ರಕಾಶ್ ಮಲ್ಕಿಒಡೆಯರ್**



## ಸೊಪ್ಪು ಹಾಕಿದ್ದು

ಇತ್ತೀಚೆಗೆ ವಿಜಯಪುರಕ್ಕೆ ಕೆಲಸದ ನಿಮಿತ್ತ ಕಾರನ್ನು ಬಾಡಿಗೆ ಮಾಡಿಕೊಂಡು ಹೋಗಿದ್ದೆವು. ಕಾರಿನ ಚಾಲಕ ಕಮ್ ಮಾಲೀಕ ನಮಗೆ ಬಹಳ ಆತ್ಮೀಯನಾಗಿದ್ದ ವ್ಯಕ್ತಿ. ದಾರಿಯುದ್ದಕ್ಕೂ ಏನೇನೊ ಮಾತಾಡುತ್ತಲೇ ಇದ್ದ. ಅವನ ಮಾತಿಗೆ ನಮ್ಮಿಂದ ಹೆಚ್ಚು ಪ್ರತಿಕ್ರಿಯೆ ಬಾರದೇ ಇದ್ದಾಗ, 'ಏನ್ರಿ ನೀವು? ನನ್ನ ಮಾತಿಗೆ ಸೊಪ್ಪು ಹಾಕುತ್ತಿಲ್ಲವಲ್ಲ...' ಎನ್ನುತ್ತಿದ್ದ. ಹುನಗುಂದದಲ್ಲಿ ಊಟಕ್ಕೆ ನಿಲ್ಲಿಸಿ ರೊಟ್ಟಿ ಖಾನಾವಳಿಗೆ ಹೋದೆವು. ಊಟಕ್ಕೆ ರೊಟ್ಟಿ ಜೊತೆ ಒಂದು ಪ್ಲೇಟ್ ತುಂಬಾ ಮೆಂತೆ ಸೊಪ್ಪು ತಂದಿಟ್ಟರು. 'ತಗೊಳ್ಳಪ್ಪ, ನನಗೆ ಸೊಪ್ಪು ಹಾಕುತ್ತಿಲ್ಲ, ಸೊಪ್ಪು ಹಾಕುತ್ತಿಲ್ಲ ಅಂತಿದ್ದೆಲ್ಲ... ಈಗ ತಟ್ಟೆ ತುಂಬಾ ಸೊಪ್ಪು ಹಾಕಿಸಿದಿವಿ ನೋಡು... ತಿನ್ನು.' ಎಂದಾಗ ಚಾಲಕನೊಟ್ಟಿಗೆ ಎಲ್ಲರೂ ನಗೆಗಡಲಲ್ಲಿ ತೇಲಿದರು.

**ಸ್ವರೂಪಾನಂದ ಕೊಟ್ಟೂರು**

